# ಧೂಮಕ್ಕೆ ಸುಪ್ರೀಂ ದಂಡ

## ತ್ಯಾಜ್ಯ ಸುಡುವವರಿಗೆ 1 ಲಕ್ಷ ರೂ. ದಂಡ ವಿಧಿಸಿ ಸುಪ್ರೀಂ ಆದೇಶ

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯಾದ್ಯಂತ ವ್ಯಾಪಿಸಿರುವ ವಿಷಕಾರಿ ಹೊಗೆ ಹಾಗೂ ಅದರಿಂದ ಸೃಷ್ಟಿಯಾಗಿರುವ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಸುಪ್ರೀಂಕೋರ್ಟ್ ಕೆಂಡಾಮಂಡಲವಾಗಿದೆ. ವಾಯು ಗುಣಮಟ್ಟವು ಗಂಭೀರದಲ್ಲೇ ಗಂಭೀರ ಸ್ಥಿತಿಗೆ ತಲುಪಿರುವ ಹಿನ್ನೆಲೆಯಲ್ಲಿ, ಪರಿಸ್ಥಿತಿ ಬಗ್ಗೆ ಕಳವಳ ಹಾಗೂ ಸರ್ಕಾರಗಳ ನಿರ್ಲಕ್ಷ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ನ್ಯಾಯಾಲಯ, ಬೆಳೆ ಕಳೆಗಳಿಗೆ ಬೆಂಕಿ ಹಚ್ಚುವುದರ ಮೇಲೆ ತಾನೇ ನಿಗಾ ಇಡುವುದಾಗಿ ಘೋಷಿಸಿದೆ.

- **ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ಕಿಡಿ**

ಅಷ್ಟೇ ಅಲ್ಲ, ಯಾರಾದರೂ ತ್ಯಾಜ್ಯ ಸುಡುವುದು ಕಂಡುಬಂದರೆ, ಅಂಥವರಿಗೆ ಬರೋಬ್ಬರಿ 1 ಲಕ್ಷ ರೂ. ದಂಡ ಹಾಗೂ ದೆಹಲಿ-ಎನ್‌ಸಿಆರ್ ಪ್ರದೇಶದಲ್ಲಿ ತ್ಯಾಜ್ಯ ಎಸೆಯುವವರಿಗೆ 5 ಸಾವಿರ ರೂ. ದಂಡ ವಿಧಿಸುವುದಾಗಿ ಕೋರ್ಟ್ ಘೋಷಿಸಿದೆ. ಜತೆಗೆ, ಈ ಕುರಿತು ಕೋರ್ಟ್ ನೀಡಿರುವ ನಿರ್ದೇಶನಗಳನ್ನು ವ್ಯಾಪಕವಾಗಿ ಪ್ರಚಾರ ಮಾಡುವಂತೆಯೂ ಸೂಚಿಸಿದೆ.

**ನಾವು ಬದುಕಲು ಸಾಧ್ಯವೇ?:** ಸೋಮವಾರ ವಾಯುಮಾಲಿನ್ಯ ಕುರಿತ ವಿಚಾರಣೆ ಆರಂಭಿಸಿದ ನ್ಯಾ. ಅರುಣ್ ಮಿಶ್ರಾ ಮತ್ತು ದೀಪಕ್ ಗುಪ್ತಾ ಅವರನ್ನೊಳಗೊಂಡ ನ್ಯಾಯಪೀಠ, ಇಂಥ ವಾತಾವರಣದಲ್ಲಿ ನಾವು ಬದುಕಲು ಸಾಧ್ಯವೇ ಎಂದು ಪ್ರಶ್ನಿಸಿತು. ನಂತರ, 'ಈ ಮಾಲಿನ್ಯದಿಂದಾಗಿ ಜನ ತಮ್ಮ ಬದುಕಿನ ಮೌಲ್ಯಯುತ ಅವಧಿಯನ್ನೇ ಕಳೆದುಕೊಳ್ಳುತ್ತಿದ್ದಾರೆ. ಪ್ರತಿ ವರ್ಷ ದೆಹಲಿಯ ಪರಿಸ್ಥಿತಿ ಇದೇ ಆಗುತ್ತಿದೆ. ಇದು ಹೀಗೆ ಮುಂದುವರಿಯಬಾರದು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪರಸ್ಪರರ ಮೇಲೆ ಆರೋಪ ಮಾಡುತ್ತಾ ದಿನದೂಡಿದರೆ ಹೇಗೆ? ಜನರು ತಮ್ಮ ತಮ್ಮ ಮನೆಗಳ ಒಳಗೂ ಸುರಕ್ಷಿತವಾಗಿಲ್ಲದಂಥ ಪರಿಸ್ಥಿತಿ ಇದೆ. ಒಂದು ನಾಗರಿಕ ಸಮಾಜದಲ್ಲಿ ಹೀಗಾಗುತ್ತಿರುವುದು ನಾಚಿಕೆಯ ಸಂಗತಿ' ಎಂದು ನ್ಯಾಯಪೀಠ ಹೇಳಿದೆ.

ಜತೆಗೆ, ಪಂಜಾಬ್, ಹರ್ಯಾಣ, ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿ ಗಳಿಗೆ ಸಮನ್ಸ್ ಜಾರಿ ಮಾಡಿ, ಬುಧವಾರ ಹಾಜರಾಗುವಂತೆ ನಿರ್ದೇಶಿಸಿದೆ. ಅಲ್ಲದೆ, ಒಂದೇ ಒಂದು ಬೆಳೆ ಕಳೆ ದಹನದಂಥ ಪ್ರಕರಣವೂ ನಡೆಯದಂತೆ ಎಲ್ಲ ರಾಜ್ಯಗಳ ಪೊಲೀಸ್ ಇಲಾಖೆ ಮತ್ತು ಸ್ಥಳೀಯಾಡಳಿತ ನೋಡಿಕೊಳ್ಳಬೇಕು ಎಂದು ಹೇಳಿದೆ.

ಈ ನಡುವೆ, ದೆಹಲಿ ಸರ್ಕಾರದ ಸಮ-ಬೆಸ ಯೋಜನೆ ಕುರಿತು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ಇದರಿಂದ ಆಗುವ ಲಾಭವಾದರೂ ಏನು ಎಂದು ಪ್ರಶ್ನಿಸಿದೆ. ಬುಧವಾರ ಮುಂದಿನ ವಿಚಾರಣೆ ನಡೆಯಲಿದೆ.



### ಸಮ-ಬೆಸ ನಿಯಮ: ಬಿಜೆಪಿ ಸಂಸದಗೆ ದಂಡ

ಮಾಲಿನ್ಯಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಮ-ಬೆಸ ವಾಹನ ನಿಯಮ ದೆಹಲಿಯಾದ್ಯಂತ ಸೋಮವಾರದಿಂದ ಜಾರಿಯಾಗಿದೆ. ಸಿಎಂ ಕೇಜ್ರಿವಾಲ್ ಅವರು ತಮ್ಮ ಸಂಪುಟ ಸಹೋದ್ಯೋಗಿಗಳ ಕಾರಿನಲ್ಲಿ ಪ್ರಯಾಣಿಸಿದರೆ, ದೆಹಲಿಯ ಜನತೆಯೂ ಸೋಮವಾರ ಕಾರ್ ಪೂಲಿಂಗ್‌ನ ಮೊರೆ ಹೋಯಿತು. ಇದೇ ವೇಳೆ, ಇದು ಕೇಜ್ರಿವಾಲ್ ಸರ್ಕಾರದ ಚುನಾವಣಾ ಸ್ಟಂಟ್ ಎಂದು ಜರೆದು, ಸಮ-ಬೆಸ ನಿಯಮ ಉಲ್ಲಂಘಿಸಿ ಕಾರು ಚಲಾಯಿಸಿಕೊಂಡು ಬಂದ ಬಿಜೆಪಿ ರಾಜ್ಯಸಭಾ ಸಂಸದ ವಿಜಯ್ ಗೋಯಲ್ ಅವರಿಗೆ ಪೊಲೀಸರು 4 ಸಾವಿರ ರೂ. ದಂಡ ವಿಧಿಸಿದ್ದಾರೆ. ಇದೇ ವೇಳೆ ದೆಹಲಿ ಸರ್ಕಾರದ ಸಚಿವ ಕೈಲಾಶ್ ಗೆಹ್ಲೋಟ್ ಅವರು ಗುಲಾಬಿ ಹೂಗಳ ಗುಚ್ಛವನ್ನು ನೀಡಿದ್ದಾರೆ.

### ಆಪ್-ಬಿಜೆಪಿ ವಾಗ್ಯುದ್ಧ

ವಾಯುಮಾಲಿನ್ಯಕ್ಕೆ ಸಂಬಂಧಿಸಿ ಆಮ್ ಆದ್ಮಿ ಪಕ್ಷದ ಸರ್ಕಾರ ಮತ್ತು ಬಿಜೆಪಿ ನಡುವೆ ತೀವ್ರ ವಾಗ್ಯುದ್ಧ ನಡೆದಿದೆ. ಮಾಲಿನ್ಯ ನಿಯಂತ್ರಿಸುವುದರ ಬದಲು ತನ್ನ ಪಕ್ಷಕ್ಕೆ ಪ್ರಚಾರ ನೀಡುವಲ್ಲಿಯೇ ಆಪ್ ಸರ್ಕಾರ ನಿರತವಾಗಿದೆ, ಮಾಲಿನ್ಯ ನಿಯಂತ್ರಣಕ್ಕೆಂದು ಕೇಂದ್ರ ಸರ್ಕಾರ ನೀಡಿರುವ 1,100 ಕೋಟಿ ರೂ.ಗಳನ್ನು ದೆಹಲಿ ಸರ್ಕಾರ ಜಾಹೀರಾತಿಗೆ ಬಳಸುತ್ತಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಆರೋಪಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಆಪ್, ಆ ಹಣದಿಂದ ಒಂದೇ ಒಂದು ಪೈಸೆ ಜಾಹೀರಾತಿಗೆ ಬಳಸಿದ್ದ ಸಾಕ್ಷ್ಯವಿದ್ದರೆ ಅದನ್ನು ಮೊದಲು ಸಲ್ಲಿಸಿ ಎಂದು ಸವಾಲು ಹಾಕಿದೆ.